ಇ) ಸರ್ಕಾರದ ಆದೇಶದಂತೆ ಮುಂದುವರೆಸಲಾಗಿತ್ತು. ಇದರಿಂದ ಸರ್ಕಾರಕ್ಕೆ ಯಾವುದೇ ನಷ್ಟವಾಗಿರುವುದಿಲ್ಲ.

ಈ) ಈಗ ಪ್ರವೇಶ ಶುಲ್ಕ ವಸೂಲಾತಿಯ ಹಕ್ಕನ್ನು ರೂ.3.20 ಕೋಟಿಗಳಿಗೆ ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮಕ್ಕೆ ಸರ್ಕಾರಿ ಆದೇಶ ದಿನಾಂಕ: 22-02-02 ರಲ್ಲಿ ವಹಿಸಲಾಗಿದೆ. ಕಳೆದ ಬಾರಿಗಿಂತ ಈ ಬಾರಿ ಉಂಟಾಗಿರುವ ಹೆಚ್ಚಳ ರೂ. 1.65 ಕೋಟಿಗಳಾಗಿರುತ್ತದೆ.

ಚಾಮರಾಜನಗರ ತಾಲ್ಲೂಕಿನ ಚಿಕ್ಕಹೊಳೆ ಮತ್ತು ಸುವರ್ಣಾವತಿ ಡ್ಯಾಂಗಳ ಹೂಳೆತ್ತುವುದು

1404 (1936) - ಶ್ರೀ ಸಿ. ಗುರುಸ್ವಾಮಿ (ಚಾಮರಾಜನಗರ) : ಮಾನ್ಯ ಜಲ ಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಾಮರಾಜನಗರ ತಾಲ್ಲೂಕು ಚಿಕ್ಕಹೊಳೆ; ಮತ್ತು ಸುವರ್ಣಾವತಿ ಡ್ಯಾಂಗಳು ನಿರ್ಮಾಣಗೊಂಡಿದ್ದು ಯಾವಾಗ; ಇದುವರೆಗೂ ಎಷ್ಟು ಭಾರಿ ಹೂಳು ತೆಗೆಯಲಾಗಿದೆ;

ಆ) ಈ ಎರಡು ಡ್ಯಾಂಗಳಲ್ಲಿ ಸಾಕಷ್ಟು ಹೂಳು ತುಂಬಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹೂಳು ತೆಗೆಯುವಲ್ಲಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಹೆಚ್.ಕೆ. ಪಾಟೀಲ್ (ಜಲ ಸಂಪನ್ಮೂಲ ಸಚಿವರು):

ಅ) ಚಿಕ್ಕಹೊಳೆ ಮತ್ತು ಸುವರ್ಣಾವತಿ ಡ್ಯಾಂಗಳು 1983-84ನೇ ಸಾಲಿನಲ್ಲಿ ಪೂರ್ಣಗೊಂಡಿರುತ್ತದೆ. ಇದುವರೆವಿಗೂ ಸದರಿ ಜಲಾಶಯದಲ್ಲಿ ಹೂಳನ್ನು ತೆಗೆದಿರುವುದಿಲ್ಲ.

ಆ) ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ. ಗಣನೀಯ ಪ್ರಮಾಣದಲ್ಲಿ ಹೂಳು ಶೇಖರಣೆಯಾಗಿರುವುದಿಲ್ಲ. ಜಲಾಶಯದ ನೀರಿನ ಶೇಖರಣೆಯಲ್ಲಿ ಯಾವುದೇ ಕಡಿತವಾಗಿರುವುದಿಲ್ಲ. ಅದಾಗ್ಯೂ ಈ ಬಗ್ಗೆ ಪರಿಶೀಲಿಸಲಾಗುತ್ತಿದೆ.

ರಾಜ್ಯದಲ್ಲಿ ಅಂಗನವಾಡಿ ಕಟ್ಟಡಗಳ ಕುರಿತು ನಿರ್ಮಾಣ

1405 (1937) - ಶ್ರೀ ಗುರುಸ್ವಾಮಿ (ಚಾಮರಾಜನಗರ) : ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ರಾಜ್ಯದಲ್ಲಿ ಈ ವರ್ಷ (2001-2002) ಎಷ್ಟು ಹೊಸ ಅಂಗನವಾಡಿ ಕಟ್ಟಡಗಳನ್ನು ಕಟ್ಟಲು ಯೋಜಿಸಲಾಗಿದೆ? (ಜಿಲ್ಲಾವಾರು ಮಾಹಿತಿ ನೀಡುವುದು)

2. ಈ ವರ್ಷದಲ್ಲಿ ಸಂಪೂರ್ಣಗೊಂಡಿರುವ ಕಾಮಗಾರಿಗಳು ಹಾಗೂ ಕಟ್ಟಡ ಕಾಮಗಾರಿಗಳು ನಡೆಯುತ್ತಿರುವ ಕಾಮಗಾರಿಗಳು ಎಷ್ಟು? (ಜಿಲ್ಲಾವಾರು ಮಾಹಿತಿ ನೀಡುವುದು)

ಶ್ರೀಮತಿ ಮೋಟಮ್ಮ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು):

1. ರಾಜ್ಯದಲ್ಲಿ ಈ ವರ್ಷ 617 ಅಂಗನವಾಡಿ ಕಟ್ಟಡಗಳನ್ನು ಕಟ್ಟಲು ಯೋಜಿಸಲಾಗಿದೆ. ಜಿಲ್ಲಾವಾರು ವಿವರವನ್ನು ಅನುಬಂಧ-I ರಲ್ಲಿ ಲಗತ್ತಿಸಿದೆ.